# ಎನ್ನೆಂಸಿ: ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ಕೆಸರು ಗದ್ದೆ ಓಟ, ನಿಧಿ ಶೋಧ, ಹಗ್ಗಾಜಗ್ಗಾಟ ಸ್ಪರ್ಧೆ

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ಯುವರೆಡ್ ಕ್ರಾಸ್ ಘಟಕದ ವತಿಯಿಂದ ಘಟಕದ ಸದಸ್ಯರಿಗೆ ಕೆಸರು ಗದ್ದೆ ಓಟ,ಹಗ್ಗಾಜಗ್ಗಾಟ,ನಿಧಿ ಶೋಧ ಸ್ಪರ್ಧೆಗಳನ್ನು ಇತ್ತೀಚೆಗೆ ಹಮ್ಮಿಕೊಳ್ಳಲಾಯಿತು. ಪೆರಾಜೆಯ ರೈ ಫಾರ್ಮ್ಸ್‌ನಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ದ.ಕ.ಜಿಲ್ಲಾ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಪಿ ಬಿ ದಿವಾಕರ ರೈ ಬಹುಮಾನ ವಿತರಿಸಿ ಮಾತನಾಡಿ, ಆಧುನಿಕತೆಯ ಭರಾಟೆಯಲ್ಲಿ ಇದ್ದರೂ ಬೇಸಾಯದ ಬಗ್ಗೆ ಅರಿಯುವ ನಿಮ್ಮ ಆಸಕ್ತಿ ಅಭಿನಂದನೀಯ. ಕೆಸರನ್ನು ಮುಟ್ಟಿಸಿಕೊಳ್ಳಲು ಹಿಂಜರಿಯುವ ಇಂದಿನ ದಿನಗಳಲ್ಲಿ ಗದ್ದೆಗೆ ಇಳಿದು ಕೆಸರು ಗದ್ದೆ ಓಟ, ಹಗ್ಗ ಜಗ್ಗಾಟ, ನಿಧಿ ಶೋಧ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡದ್ದು ಶ್ಲಾಘನೀಯ ವಿಚಾರ ಎಂದರು. ಪ್ರಗತಿಪರ ಕೃಷಿಕ ಪಿ ಬಿ ಪ್ರಭಾಕರ ರೈ, ನಿವೃತ್ತ ಮುಖ್ಯೋಪಾಧ್ಯಾಯ ಜತ್ತಪ್ಪ ಎ ಕೆ, ಕಾಲೇಜಿನ ಪ್ರಾಂಶುಪಾಲ ಡಾ. ಕೆ ಗಿರಿಧರ ಗೌಡ, ವರ್ತಕರ ಸಂಘದ ಅಧ್ಯಕ್ಷ, ರಕ್ತದಾನಿ ಪಿ ಬಿ ಸುಧಾಕರ ರೈ, ಕೆ ವಿ ಜಿ ಪಾಲಿಟೆಕ್ನಿಕ್‌ನ ಎನ್ನೆಸ್ಸೆಸ್ ಅಧಿಕಾರಿ ಚಂದ್ರಶೇಖರ ಬಿಳಿನೆಲೆ, ಕಾರ್ಯಕ್ರಮಾಧಿಕಾರಿ ಡಾ. ಅನುರಾಧಾ ಕುರುಂಜಿ, ಘಟಕದ ಹಿರಿಯ ಸದಸ್ಯರಾದ ದೀಕ್ಷಿತ್, ಗಣೇಶ್, ತೇಜಸ್ ಮೊದಲಾದವರು ಉಪಸ್ಥಿತರಿದ್ದರು.

ಕೆಸರು ಗದ್ದೆ ಓಟದಲ್ಲಿ ಹುಡುಗರ ವಿಭಾಗದಲ್ಲಿ ಪ್ರಥಮ– ರೋಷನ್ ಕೆ ಯು (ದ್ವಿತೀಯ ಬಿ ಕಾಂ), ದ್ವಿತೀಯ– ಧರ್ಮಪ್ರಸಾದ್ (ಪ್ರಥಮಬಿ ಎಸ್ ಡಬ್ಲ್ಯೂ) ತೃತೀಯ– ಶ್ರವಣ್ (ದ್ವಿತೀಯ ಬಿ ಕಾಂ) ಪಡೆದುಕೊಂಡರೆ ಹುಡುಗಿಯರ ವಿಭಾಗದಲ್ಲಿ ಪ್ರಥಮ– ತೃಪ್ತಿ (ದ್ವಿತೀಯ ಬಿ ಎಸ್ಸಿ), ದ್ವಿತೀಯ– ನಮಿತಾ (ಪ್ರಥಮ ಬಿಕಾಂ), ತೃತೀಯ – ತನುಶ್ರೀ (ದ್ವಿತೀಯ ಬಿ ಎಸ್ಸಿ)ಪಡೆದುಕೊಂಡರು. ನಿಧಿ ಶೋಧದಲ್ಲಿ ಪ್ರಜ್ಞಶ್ರೀ ದೇವಿ (ದ್ವಿತೀಯ ಬಿ ಎಸ್ ಡಬ್ಲ್ಯೂ) ವಿಜೇತರಾದರೆ, ಹಗ್ಗ ಜಗ್ಗಾಟದಲ್ಲಿ ವಿಷ್ಣುಪ್ರಸನ್ನ ಮತ್ತು ತಂಡ– ಪ್ರಥಮ, ಕೃತಿಕಾ ಮತ್ತು ತಂಡ –ದ್ವಿತೀಯ, ಪಲ್ಲವಿ ಮತ್ತು ತಂಡ– ತೃತೀಯ ಸ್ಥಾನ ಪಡಕೊಂಡರು.